Govt. of Karnataka [C.R.P. 67

Deposition Sheets (R.P. No. 57) Form No. 4 (Criminal)

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ, ಶಿರಾ**

**ಪ್ರಕರಣ ಸಂಖ್ಯೆ: 3871/2022**

| | | | |
|---|---|---|---|
| ದಿನಾಂಕ: 27-05-2025 ರಂದು ಸಾಕ್ಷಿಗೆ ಪ್ರಮಾಣ ವಚನವನ್ನು ಭೋದಿಸಲಾಯಿತು. | | | |
| ಸಿಡಬ್ಲ್ಯೂ : | 02 | ಪಿಡಬ್ಲ್ಯೂ | 02 |
| ಹೆಸರು | ರಮೇಶ್ | | |
| ತಂದೆ / ಗಂಡನ ಹೆಸರು | ನಾಗರಾಜಪ್ಪ | | |
| ವಯಸ್ಸು | 30 ವರ್ಷ | | |
| ಉದ್ಯೋಗ | ಖಾಸಗಿ ಉದ್ಯೋಗಿ | | |
| ವಾಸ | ತುಮಕೂರು . | | |

**ಮುಖ್ಯ ವಿಚಾರಣೆ: ಎ ಪಿ ಪಿ ರವರಿಂದ:**

ಆರೋಪಿಯನ್ನು ನಾನು ನೋಡಿರುವುದಿಲ್ಲ. ಚಾಸಾ.1 ಮತ್ತು 3 ರವರು ನನಗೆ ಗೊತ್ತಿಲ್ಲ. ಸಾಕ್ಷಿಗೆ ಪಂಚನಾಮೆಯನ್ನು ತೋರಿಸಲಾಗಿ ಅದನ್ನು ನಿಪಿ.3 ಎಂದು ಅವರ ಸಹಿಯನ್ನು ನಿಪಿ.3 ಎ ಎಂದು ಗುರುತಿಸಲಾಯಿತು. ಸುಮಾರು 3 ವರ್ಷಗಳ ಹಿಂದೆ ದೊಡ್ಡ ಆಲದ ಮರದ ಬಳಿ ಇರುವ ಡಾಬಾಗೆ ಹೋಗಿದ್ದಾಗ ಪೋಲೀಸರು ನಿಪಿ.3 ಕ್ಕೆ ಸಹಿ ಪಡೆದಿದ್ದಾರೆ. ಅದರಲ್ಲಿರುವ ಅಂಶಗಳು ನನಗೆ ಗೊತ್ತಿಲ್ಲ. ನಾನು ಈ ಅಪಘಾತವನ್ನು ಪ್ರತ್ಯಕ್ಷವಾಗಿ ನೋಡಿಲ್ಲ. ಅಪಘಾತ ಪಡಿಸಿದ ಮತ್ತು ಅಪಘಾತವಾದ ವಾಹನದ ಸಂಖ್ಯೆ ನನಗೆ ಗೊತ್ತಿಲ್ಲ. ಅಪಘಾತ ಯಾರ ತಪ್ಪಿ ನಿಂದ ಆಗಿದೆ ಎಂದು ನನಗೆ ಗೊತ್ತಿಲ್ಲ. ಪೊಲೀಸರಿಗೆ ಯಾವುದೇ ರೀತಿಯ ಹೇಳಿಕೆಯನ್ನು ನೀಡಿರುವುದಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಎಪಿಪಿ ರವರು ಪಾಟೀ ಸವಾಲು ಮಾಡಲು ಅನುಮತಿಯನ್ನು ಕೋರಿರುತ್ತಾರೆ. ಸಾಕ್ಷಿಯನ್ನು ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು)

**<u>ಪಾಟೀ ಸವಾಲುಃ ಎಪಿಪಿ ರವರಿಂದಃ</u>**

ದಿಃ 06.02.2022 ರಂದು ದೊಡ್ಡಆಲದ ಮರದ ಗ್ರಾಮದ ಬಳಿ ಪಲ್ಲವಿ ಡಾಬಾ ಗೆ ನನ್ನ ಸ್ನೇಹಿತರು ಊಟಕ್ಕೆ ಕರೆದಿದ್ದರು ಎಂದರೆ ಸರಿಯಲ್ಲ. ಅದೇ ದಿನ 2.30 ಸಮಯದಲ್ಲಿ ಮೃತ ಪ್ರಕಾಶ್ ರವರು ಕೆಎ-504 ಡಬ್ಲ್ಯೂ -2665 ದ್ವಿಚಕ್ರವಾಹನದಲ್ಲಿ ಬರುತ್ತಿದ್ದಾಗ ಆರೋಪಿಯು ಕೆಎ-06-ಎನ್-4243 ಡಸ್ಟರ್ ಕಾರನ್ನು ಅತೀವೇಗವಾಗಿ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ಅಪಘಾತಪಡಿಸಿದರು ಎಂದರೆ ಸರಿಯಲ್ಲ. ಸದರಿ ಅಪಘಾತದಲ್ಲಿ ಆದ ಗಾಯಗಳಿಂದ ಮೃತ ಪ್ರಕಾಶ್ ರವರು ಮೃತಪಟ್ಟಿದ್ದಾನೆ ಎಂದರೆ ಸರಿಯಲ್ಲ. ದಿಃ18.03.2022 ರಂದು ಪೋಲೀಸರಿಗೆ ಹೇಳಿಕೆಯನ್ನು ನೀಡಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಗೆ ಹೇಳಿಕೆಯನ್ನು ತೋರಿಸಲಾಗಿ ಅದನ್ನು ನಿಪಿ.4 ಎಂದು ಗುರುತಿಸಲಾಯಿತು. ದಿಃ 18.03.2022 ರಂದು ಪೋಲೀಸರು ಅಪಘಾತ ಸ್ಥಳಕ್ಕೆ ನನ್ನ ಮತ್ತು ಚಾಸಾ.9 ರವರ ಸಮಕ್ಷಮ ಮಧಾಹ್ನ 12.30 ರಿಂದ 1.30 ರವರೆಗೆ ಪಂಚನಾಮೆ ಜರುಗಿಸಿದರು ಎಂದರೆ ಸರಿಯಲ್ಲ. ಈ ಸಮಯದಲ್ಲಿ ಪೋಟೋ ತೆಗೆದಿದ್ದಾರೆ ಎಂದರೆ ಸರಿಯಲ್ಲ. ನಿಪಿ.3 ಮತ್ತು 4 ರಲ್ಲಿರುವ ಅಂಶಗಳು ಗೊತ್ತಿದ್ದರೂ ಸಹ ಆರೋಪಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರುವಿಚಾರಣೆ ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಕಂಪ್ಯೂಟರೀಕರಣಗೊಳಿಸಿ ಪ್ರಿಂಟ್ ತೆಗೆಯಲಾಯಿತು.)

ಓ. ಹೇ. ಕೇ. ಸರಿ. ಇದೆ.

ಸಹಿ/-
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಶಿರಾ.